# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/57/16-17 ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
| --- | --- |
| 1)ಶ್ರೀ ಶ್ರೀಕಾಂತ ತಂದೆ ದುರ್ಗಾಪ್ರಸಾದ್<br>ಶ್ರೀಬಾಲಾಜಿ ರೆಸಿಡೆನ್ಸಿ, ಮಹಿಳಾ ಕಾಲೇಜ್ 1ನೇ ಕ್ರಾಸ್<br>ಗಾಂಧಿನಗರ ಬಳ್ಳಾರಿ<br>**ಶ್ರೀ.ಜಿ.ಡಿ ಚಂದ್ರಶೇಖರ ವಕೀಲರು**<br>**ಮತ್ತು ವಿದ್ಯಾಶ್ರೀ ವಕೀಲರು ಬಳ್ಳಾರಿ** | 1)ಕಂದಾಯ ನಿರೀಕ್ಷಕರು ಬಳ್ಳಾರಿ<br>2)ತಹಶೀಲ್ದಾರರು ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
| --- | --- | --- | --- |
| ಬಳ್ಳಾರಿ | ಅಂದ್ರಾಳ್ | 89 ಸಿ | 2.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ ಹೆಚ್ 39/15-16 ದಿನಾಂಕ 23-04-2016 ಮತ್ತು ಎಂ ಆರ್ ನಂ ಹೆಚ್40/15-16 ದಿನಾಂಕ 23-04-2016 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 16/09/2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಅಂದ್ರಾಳ್ ಗ್ರಾಮದ ಸ.ನಂ 89ಸಿ ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ ಹೆಚ್ 39 /15-16 ದಿನಾಂಕ 23-04-2016 ಮತ್ತು ಎಂ ಆರ್ ನಂ ಹೆಚ್40/15-16 ದಿನಾಂಕ 23-04-2016 ರ ರನ್ವಯ ಅಪೀಲುದಾರರ ಹೆಸರು ಪಹಣಿ ಕಲಂ 09 ರಲ್ಲಿ ಎರೆಡು ಬಾರಿ ನಮೂದಾಗಿದ್ದು, ಒಂದು ಹೆಚ್ಚುವರಿ ನಮೂದನ್ನು ತೆಗೆದುಹಾಕುವಂತೆ ಕೋರಿ ಮನವಿ ಸಲ್ಲಿಸಿರಿತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪೀಲುದಾರರು ಸಲ್ಲಿಸಿದ ದಾಖಲೆಗಳಾದ ಕ್ರಯ ಪತ್ರ ಮತ್ತು ಪಹಣಿ, ಈ.ಸಿ, ಗಳನ್ನು ಪರಿಶೀಲಿಸಲಾಗಿ, ಅಪೀಲುದಾರರು ಸದರಿ ಜಮೀನನ್ನು, ನೊಂದಾಯಿತ ಕ್ರಯಪತ್ರ ಸಂಖ್ಯೆ 14578/15-16 ದಿನಾಂಕ 17-02-2016 ಖರೀದಿಸಿದ್ದು, ಸದರಿ ಕ್ರಯ ಪತ್ರದಂತೆ ಹಕ್ಕು ಬದಲಾವಣೆಯಾಗುವ ಸಂದರ್ಭದಲ್ಲಿ ಎರೆಡುಬಾರಿ ಹಕ್ಕುಬದಲಾವಣೆ ಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಕಾರಣ ಹೆಚ್ಚುವರಿ ನಮೂದಾದ ಹಕ್ಕುಬದಲಾವಣೆ ಸಂಖ್ಯೆಯನ್ನು ತೆಗೆದುಹಾಕುವ ಕುರಿತು ಈ ಕೆಳಕಂಡ ಆದೇಶ .

**ಮುಂದಿನ ಪುಟಕ್ಕೆ...**